ಆ. ಹಾಗಾದರೆ ವ್ಯಾಪಾರ - ಉದ್ದಿಮೆ ಬೆಳೆಯುತ್ತಿರುವ ನಗರದಲ್ಲಿ ಹುಡ್ಕೋ ನೆರವಿನ ವಸತಿ ಸಮುಚ್ಛಯಗಳು ಅಗತ್ಯವೆಂದು ಸರ್ಕಾರ ಮನಗುಂಡಿರುವುದೇ?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಉ. ಹೌದು

ಆ. ಹೌದು, ಆದರೆ ಮಹಾನಗರ ಪಾಲಿಕೆಯು ತನ್ನದೆ ಆದ ಸಂಪನ್ಮೂಲದಿಂದ ಅಥವ ಆರ್ಥಿಕ ಸಂಸ್ಥೆಗಳಿಂದ ನೆರವನ್ನು ಪಡೆದು ಅವಶ್ಯಕ ವಸತಿ ಸಮುಚ್ಛಯಗಳನ್ನು ನಿರ್ಮಿಸಲು ಕ್ರಮವಹಿಸಬೇಕಾಗುತ್ತದೆ.

**ರಾಜ್ಯದ ಗ್ರಾಮಪಂಚಾಯತಿಗಳಲ್ಲಿ ಗುತ್ತಿಗೆ ಆಧಾರದ ನೌಕರರನ್ನು ಖಾಯಂ ಗೊಳಿಸುವಿಕೆ**

1454(1876) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಉ. ರಾಜ್ಯದ ಗ್ರಾಮ ಪಂಚಾಯತಿಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ಹುದ್ದೆವಾರು ಮಾಹಿತಿ ನೀಡುವುದು)

ಆ. ಬಿಜಾಪುರ ಜಿಲ್ಲೆಯಲ್ಲಿ ಎಷ್ಟು ಜನ ಗುತ್ತಿಗೆ ಆಧಾರದ ಮೇಲಿದ್ದಾರೆ? (ಹುದ್ದೆವಾರು ವಿವರಗಳನ್ನು ವಿಧಾನಸಭಾ ಕ್ಷೇತ್ರವಾರು ನೀರುವುದು)

ಇ. ಇವರುಗಳನ್ನು ಖಾಯಂ ಮಾಡುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

ಉ. ಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳುವುದಿಲ್ಲ.

ಆ. ಬಿಜಾಪುರ ಜಿಲ್ಲೆಯಲ್ಲಿನ ಯಾವುದೇ ವಿಧಾನಸಭಾ ಕ್ಷೇತ್ರದಲ್ಲಿ ಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಂಡಿರುವುದಿಲ್ಲ.

ಇ. ಉದ್ಭವಿಸುವುದಿಲ್ಲ.

**ರಾಜ್ಯದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿ ನಿರ್ಮಿಸಿರುವ ಮನೆಗಳು**

1455(1875) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಉ. ರಾಜ್ಯದಲ್ಲಿ ಕಳೆದ 2 ವರ್ಷಗಳಿಂದ ಕೊಳಚೆ ನಿರ್ಮೂಲನ ಮಂಡಳಿ ವತಿಯಿಂದ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ. ಇದಕ್ಕೆ ಆಗಿರುವ ವೆಚ್ಚ ಎಷ್ಟು;

ಆ. ಈ ಹಣವನ್ನು ಯಾವ ಮೂಲದಿಂದ ಸಂಗ್ರಹಿಸಲಾಗಿದೆ;

ಇ. ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಕಳೆದ ವರ್ಷಗಳಿಂದ ಬಿಜಾಪುರ ಜಿಲ್ಲೆಗೆ ಮಂಜೂರು ಮಾಡಿರುವ ಮನೆಗಳು ಎಷ್ಟು; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

ಈ. ಆಲಮಟ್ಟಿ ಯೋಜನೆಯಡಿ ಮುಳುಗಡೆಯಾಗಿರುವ ಗ್ರಾಮಗಳಿಗೆ ಹೆಚ್ಚುವರಿ ಮನೆ ಮಂಜೂರು ಮಾಡುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಸಿ.ಆರ್. ಸಗೀರ ಅಹಮದ್ (ವಸತಿ ಸಚಿವರು)

ಅ. 2000-2001 ಹಾಗೂ 2001-2002 ನೇ ಸಾಲಿನಲ್ಲಿ ಮಂಡಳಿಯು ರಾಜ್ಯದಲ್ಲಿ ನಿರ್ಮಿಸಿರುವ ಒಟ್ಟು ಮನೆಗಳ ಸಂಖ್ಯೆ 6306. ಈ ಮನೆಗಳ ನಿರ್ಮಾಣಕ್ಕೆ ತಗಲಿರುವ ಒಟ್ಟು ವೆಚ್ಚ 3276.10 ಲಕ್ಷ ರೂ.ಗಳು

ಆ. ಈ ಹಣವನ್ನು ಶೇ. 80 ರಂತೆ ಹುಡ್ಕೋ ಸಂಸ್ಥೆಯಿಂದ ಸಾಲವನ್ನಾಗಿಯೂ ಹಾಗೂ ಉಳಿದ ಶೇ. 20 ರಷ್ಟು ಹಣವನ್ನು ರಾಜ್ಯ ಸರ್ಕಾರದ ಅನುಧಾನದ ಮೂಲಕ ಸಂಗ್ರಹಿಸಿದೆ.

ಇ. ಮಂಡಳಿಯು 2000-2001 ಮತ್ತು 2001-2002ನೇ ಸಾಲಿಗೆ ಬಿಜಾಪುರ ಜಿಲ್ಲೆಗೆ ಮಂಜೂರು ಮಾಡಿದ ಮನೆಗಳ ಸಂಖ್ಯೆ 200, ವಿಧಾನಸಭಾ ಕ್ಷೇತ್ರವಾರು ವಿವರ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂ | ವರ್ಷ | ಯೋಜನೆ ವಿವರ/ವಿಧಾನಸಭಾವಾರು | ಮನೆಗಳ ಸಂಖ್ಯೆ |
|---|---|---|---|
| 1. | 2000-02 | ಸಿಂದಗಿ (ಹಂತ-I) | 50 |
| 2. | 2001-02 | ಮುದ್ದೋಳ 50 | |
| | | ಸೌದತ್ತಿ | 50 |
| | | ಸಿಂದಗಿ (ಹಂತ-II) | 50 |
| | | ಒಟ್ಟು | **200** |

ಈ. ಅಲಮಟ್ಟಿ ಯೋಜನೆಯಡಿ ಮುಳುಗಡೆಯಾಗಿರುವ ಪ್ರದೇಶದ ಬಾಗಲಕೋಟೆ ನಗರದ ಕೊಳಚೆ ನಿವಾಸಿಗಳಿಗೆ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿವತಿಯಿಂದ ಮೊದಲನೆ ಹಂತದಲ್ಲಿ ವಾಂಬೆ ಯೋಜನೆಯಡಿ 163 ಮನೆಗಳನ್ನು ಎರಡನೇ ಹಂತದಲ್ಲಿ 1000 ಮನೆಗಳನ್ನು ತೆಗೆದುಕೊಳ್ಳಲಾಗಿದ್ದು. ಈಗ 163 ಮನೆಗಳು ನಿರ್ಮಾಣ ಹಂತದಲ್ಲಿದೆ.

**ನಾಗಮಂಗಲ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಬವಣೆ**

1456(1568) ಶ್ರೀ ಚಲುವರಾಯ ಸ್ವಾಮಿ ಎನ್. (ನಾಗಮಂಗಲ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ನಾಗಮಂಗಲ ತಾಲ್ಲೂಕಿಗೆ ಕುಡಿಯುವ ನೀರಿನ ಯೋಜನೆ ಮಂಜೂರಾಗಿ ನೀರಿನ ಸಂಪನ್ಮೂಲವಿಲ್ಲದೇ ನಿಂತಿರುವ ಹಳ್ಳಿಗಳು ಎಷ್ಟು; ಹಾಗೂ ನಾಗಮಂಗಲ ತಾಲ್ಲೂಕು ಬಹಳ ಹಿಂದುಳಿದ ಪ್ರದೇಶವಾಗಿದ್ದು ವಿಶೇಷ ಯೋಜನೆಯಡಿಯಲ್ಲಿ ಕುಡಿಯುವ ನೀರಿಗೆ ಹಣ ಬಿಡುಗಡೆ ಮಾಡಲಾಗುವುದೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

ಅ. ನಾಗಮಂಗಲ ತಾಲ್ಲೂಕಿನ (ಮಾವಿನಕಟ್ಟೆಕೊಪ್ಪಲು-ಮೋಳೆ-ದಂಡೇಬಾಲ, ವಡ್ಡರಹಳ್ಳಿ-ದಾಸರಹಳ್ಳಿ, ತಿರುಮಲಪುರ-ಬೀಚನಹಳ್ಳಿ, ಅಡಕತನಹಳ್ಳಿ, ಚೊಟ್ಟಕ್ಯಾತನಹಳ್ಳಿ, ತಟ್ಟೆಕರೆ, ಎ.ಶ್ರೀರಾಮನಹಳ್ಳಿ, ಚೌಡಗೋನಹಳ್ಳಿ-ಗೂಡೇಹೊಸಹಳ್ಳಿ, ಹದಂಗೆರೆ, ಗಿಡಿವಿನಹೊಸಹಳ್ಳಿ-ಗಿಡುವಿನಹೊಸಹಳ್ಳಿ ಕೊಪ್ಪಲು, ಭದ್ರೇಗೌಡನಕೊಪ್ಪಲು, ಅಡವೀಕಟ್ಟೆ,